**Code No. 08 X(A)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

ಜೂನ್, 2016

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ದೇಶ, ಕಾಲತೀತವಾಗಿ ಎಲ್ಲ ಕಾಲಗಳಲ್ಲಿ ಇರುವ ಪರವಸ್ತುವೇ ಪರಮಸತ್ಯ. ಅದನ್ನೇ ಪರಮಾತ್ಮ, ಪರಮೇಶ್ವರ, ಮಹದೇವ, ಬ್ರಹ್ಮ ಎಂಬ ಮುಂತಾದ ಪಾವನ ನಾಮಗಳಿಂದ ಕರೆಯುವರು. ಸರ್ವಶಕ್ತ, ಸರ್ವಜ್ಞ, ಸರ್ವವ್ಯಾಪ್ತಿಯಾದ ಆ ಮಹಾದೇವನು ಎಲ್ಲೆಡೆಯಲ್ಲಿ ಇರುವಾಗ ಎಲ್ಲರಿಗೂ ಅವನು ಕಾಣುವುದಿಲ್ಲ, ಏಕೆ ? ಕಾಣದಿದ್ದರೆ ಆ ದೇವನು ಇರುವನೆಂದು ಯಾವ ಆಧಾರದ ಮೇಲೆ ಹೇಳುವುದು. ಒಂದು ವೇಳೆ ಸರ್ವಶಕ್ತನಾದ ಆ ಮಹಾದೇವನಿರುವುದೇ ಆದರೆ, ಈ ಪ್ರಪಂಚದಲ್ಲಿ ಸಾವು ನೋವು, ಕಷ್ಟ ನಷ್ಟ, ದುಃಖ ದುಮ್ಮಾನ, ಅನ್ಯಾಯ ಅನೀತಿ ಏಕಿವೆ ? ಇಂಥ ಅಸಂಖ್ಯ ಪ್ರಶ್ನೆಗಳನ್ನು ಕೇಳುವರಿಗೇನೂ ಕೊರತೆ ಇಲ್ಲ. ಒಂದು ರೀತಿಯಿಂದ ನಾಸ್ತಿಕರ ವಾದದಂತೆ ಕಾಣುವ ಈ ಎಲ್ಲ ಪ್ರಶ್ನೆಗಳಿಗೆ ಲೋಕಪೂಜ್ಯರಾದ ಋಷಿ ಮುನಿಗಳ, ಸಂತರ ಶರಣರ ಜೀವನದಲ್ಲಿ, ಉಪದೇಶದಲ್ಲಿ ಸುಂದರವೂ, ಸರಳವೂ, ಹೃದಯ ಸ್ಪರ್ಶಿಯಾದ ಉತ್ತರವನ್ನು ನಾವು ಕಾಣಬಹುದಾಗಿದೆ.

ಪರಮಸತ್ಯ ಪರಮಾತ್ಮನು ಮುಸುಕಿರುವ ಮಾಯಾಮೋಹದ ಪರದೆಯು ಸಾಮಾನ್ಯವಾದುದಲ್ಲ. ಅದು ಸರ್ವಜನಪ್ರಿಯವಾದ ಸುವರ್ಣದ ಪಾತ್ರೆ, ಧನ ಕನಕ, ವಸ್ತು ಒಡವೆ, ಸತಿ ಸುತರು, ಅಧಿಕಾರ ಅಂತಸ್ತು, ಕೀರ್ತಿ ವಾರ್ತೆ, ಒಂದೇ, ಎರಡೇ, ನೂರು ಸಾವಿರ ಬಗೆಯ ಪ್ರಾಪಂಚಿಕ ವಿಷಯ ವಸ್ತುಗಳಿಂದ ಅದು ನಿರ್ಮಾಣವಾಗಿದೆ. ಈ ಸುವರ್ಣ ಮೋಹ ಮುಸುಕನ್ನು ಹರಿದು ಹಾಕಲು ಬುದ್ಧ, ಬಸವ, ಮಹಾವೀರರಂಥ ಎಂಟೆದೆಯ ಬಂಟರೇ ಬೇಕು. ವಿಷಯ ವಾಸನೆಯಲ್ಲಿ ನಿತ್ಯ ಮುಳುಗೇಳುತ್ತಿರುವ ಅಜ್ಞರಾದ ಹುಲು ಮಾನವರಿಂದ ಮಾಯೆ ಗೆಲ್ಲುವುದು ಕನಸು ಮನಸ್ಸಿನಲ್ಲಿಯೂ ಸಾಧ್ಯವಿಲ್ಲ.

[ Turn over

ಒಬ್ಬ ಪ್ರಜಾಪ್ರೇಮಿಯಾದ ಮಹಾರಾಜ, ಅವನು ದಾನ ಧರ್ಮಾದಿ ಸತ್ಕಾರ್ಯಗಳಿಗೆ ಹೆಸರುವಾಸಿಯಾಗಿದ್ದ. ಮಧ್ಯಮ ವಯಸ್ಸು ದಾಟಿದ್ದರೂ ಅವನಿಗೆ ಗಂಡು ಮಗುವಾಗಿರಲಿಲ್ಲ. ಕೆಲವು ದಿನಗಳ ನಂತರ ದೇವರ ಕರುಣೆಯಿಂದ ಅವನಿಗೊಂದು ಗಂಡು ಮಗು ಜನಿಸಿತು. ಮಹಾರಾಜನಿಗೆ ಆದ ಸಂತಸ ಅವರ್ಣನೀಯವಾದದು. ತನ್ನ ಸಂತಸವನ್ನು ಪ್ರಜೆಗಳೊಂದಿಗೆ ಹಂಚಿಕೊಳ್ಳುವುದಕ್ಕಾಗಿ ಮಹಾರಾಜನು ತನ್ನ ರಾಜ್ಯದ ಪ್ರಜೆಗಳಿಗೆಲ್ಲ ಉಚಿತವಾದ ಉಡುಗೊರೆ ಕೊಡುವುದಾಗಿ ಡಂಗುರ ಸಾರಿದ. ಈ ಸಂತಸದ ಸಮಾರಂಭವನ್ನು ಎಂದು ಏರ್ಪಡಿಸಲಾಗುವುದು ಎಂಬುದನ್ನು ಪ್ರಜೆಗಳಿಗೆ ತಿಳಿಸಿದ. ಆ ದಿನ ಜನ ಆರಮನೆಯ ಮುಂದೆ ಸಾಲು ಸಾಲಾಗಿ ನಿಂತಿದ್ದರು. ಮಹಾರಾಜನು ಮುಗುಳು ನಗೆಯೊಂದಿಗೆ ಪ್ರಜೆಗಳನ್ನು ಸ್ವಾಗತಿಸುತ್ತ ಅವರವರಿಗೆ ಯೋಗ್ಯವಾದ ಉಡುಗೊರೆ ಕೊಟ್ಟು ಕಳುಹಿಸುತ್ತಿದ್ದ. ಪ್ರಜೆಗಳೆಲ್ಲ ಸಂತಸದಿಂದ ಉಡುಗೊರೆ ಸ್ವೀಕರಿಸಿ ಮುನ್ನಡೆಯುತ್ತಿದ್ದರು. ಅದರಲ್ಲಿ ಒಬ್ಬ ಪ್ರಸಿದ್ಧ ಆಸ್ಥಾನ ಪಂಡಿತನ ಸರದಿ ಬಂದಿತು. ಕೂಡಲೇ ಮಹಾರಾಜನು ಅವನಿಗೊಂದು ದೊಡ್ಡ ಕುಂಬಳಕಾಯಿಯನ್ನು ಉಡುಗೊರೆಯಾಗಿ ನೀಡಿದ. ಇದನ್ನೇನು ಮಾಡುವುದೆಂದು ಪಂಡಿತನು ನಿರಾಶೆಯಿಂದ ಮನೆಗೆ ಹೋಗುವಾಗ ದಾರಿಯೊಳಗಿದ್ದ ಒಂದು ಹಳ್ಳದಲ್ಲಿ ಕುಂಬಳಕಾಯಿಯನ್ನು ಚೆಲ್ಲಿದ. ಆಶ್ಚರ್ಯವೇನೆಂದರೆ ಮಹಾರಾಜನು ಆ ಕುಂಬಳಕಾಯಿಯಲ್ಲಿ ಮುತ್ತುರತ್ನಗಳನ್ನೇ ತುಂಬಿಸಿ ಕೊಟ್ಟಿದ್ದ. ಆದರೆ ದುರ್ದೈವಶಾತ್ ಪಂಡಿತನು ಕುಂಬಳಕಾಯಿಯನ್ನು ಒಡೆದು ನೋಡಲಿಲ್ಲ. ಹೊರಗಿನ ರೂಪವನ್ನೇ ನೋಡಿ ಇದರಲ್ಲಿ ಏನಿದೆ ಎಂದು ಅದನ್ನು ಹಳ್ಳಕ್ಕೆ ಹಾಕಿದ್ದ. ಅಮೂಲ್ಯವಾದ ಸಂಪತ್ತನ್ನೇ ಕಳೆದುಕೊಂಡಿದ್ದ.

ಈ ಪ್ರಪಂಚವೇ ಮಹಾದೇವನೆಂಬ ಮಹಾರಾಜನು ನೀಡಿರುವ ಒಂದು ಉಚಿತ ಉಡುಗೊರೆ. ಆದರೆ ಈ ನಶ್ವರವಾದ ಪ್ರಪಂಚದಲ್ಲಿರುವ ವಸ್ತುಗಳ ಹೊರರೂಪಕ್ಕೆ ಮನುಷ್ಯನು ಮರುಳಾಗುತ್ತಾನೆ. ಈ ಪ್ರಪಂಚದ ಕಣ ಕಣದಲ್ಲಿಯೂ ಪರಮಾತ್ಮನೆಂಬ ಅಮೂಲ್ಯ ಸಂಪತ್ತಿದೆ ಎಂಬುದನ್ನು ಮರೆಯುತ್ತಾನೆ. ನಮ್ಮ ಋಷಿಮುನಿಗಳು ಹಾಕಿಕೊಟ್ಟಿರುವ ಸನ್ಮಾರ್ಗದಲ್ಲಿ ನಡೆದಾಗ ನಾವು ಪರಮಸತ್ಯ ಪರಮಾತ್ಮನ ದರ್ಶನ ಪಡೆದು ಪರಮಶಾಂತಿ ಸಾಮ್ರಾಜ್ಯದಲ್ಲಿ ನೆಲೆಸುತ್ತೇವೆ. ಇದುವೇ ಸದ್ಧರ್ಮ. ನಮ್ಮ ಶರೀರ, ಮನಸ್ಸು ಮತ್ತು ಜೀವಶಕ್ತಿ ಎಲ್ಲವೂ ಭಗವಂತನ ಸಾಂಗತ್ಯದಿಂದ ಪುನೀತವಾಗಿದೆ. ಅವನು ಯಾವಾಗಲೂ ಅವುಗಳ ಜತೆಯಲ್ಲಿರುತ್ತಾನೆ ಎಂಬುದನ್ನು ಮನನ ಮಾಡಿಕೊಳ್ಳಬೇಕು.